MANGALORE MARKET REPORTS

MMR MEDIA Since 1975

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.48 ENGLISH DAILY Subscription Yearly - Rs. - THURSDAY 17-3-2022

ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.

## ಜಾಗತಿಕ ಸಕ್ಕರೆ ದರ ಹೆಚ್ಚಳ, ಭಾರತದಿಂದ ರಫ್ತಿಗೆ ವೇಗ

ಜಾಗತಿಕ ಸಕ್ಕರೆ ದರ ಹೆಚ್ಚಳದಿಂದ ಭಾರತದಿಂದ ಸಕ್ಕರೆ ರಫ್ತಿಗೆ ವೇಗ ಹೆಚ್ಚಳವಾಗಿದೆ. ಇತ್ತೀಚೆಗೆ ಸಕ್ಕರೆ ಕಾರ್ಖಾನೆಗಳು 5,50,000 ಟನ್ ಸಕ್ಕರೆ ರಫ್ತಿಗೆ ಒಡಂಬಡಿಕೆ ಮಾಡಿಕೊಂಡಿದೆಯೆನ್ನಲಾಗಿದೆ.

## ಪ್ರತಿಕೂಲ ಹವಾಮಾನ ಕಚ್ಚಾ ಗೋಡಂಬಿ ಉತ್ಪಾದನೆ ಇಳಿಕೆ

ಮಾರ್ಚ ತಿಂಗಳಲ್ಲೂ ಮುಂದುವರಿದ ಪ್ರತಿಕೂಲ ಹವಾಮಾನದಿಂದ ಗೋಡಂಬಿ ಬೆಳೆಯುವ ಹಲವು ಪ್ರದೇಶಗಳಲ್ಲಿ ಹೂ ಬಿಟ್ಟರೂ ಫಲ ಬಲಿಯದೆ ಉತ್ಪಾದನೆಯಲ್ಲಿ ಗಣನೀಯ ಇಳಿಕೆಯಾಗುವ ಸಂಭವವಿದೆ. ದೇಶೀ ಕಚ್ಚಾ ಗೋಡಂಬಿ ಉತ್ಪಾದನೆ ಇಳಿಕೆಯಾಗುವ ಸಾಧ್ಯತೆಯಿದೆ.

## ಕಾಳು ಮೆಣಸು ದರ ಹೆಚ್ಚಳ ಸಾಧ್ಯತೆ

ಹೊಸ ಬೆಳೆಯ ಕೊಯಿಲು ಹೆಚ್ಚಿನಂಶ ಪೂರ್ಣಗೊಂಡ ಸಮಯದಲ್ಲಿ ಹಿಂದಿನ ವರ್ಷಕ್ಕೆ ಹೋಲಿಸಿದಲ್ಲಿ ಈ ವರ್ಷ ದರ ಹೆಚ್ಚಳವಾಗಿದೆ. ಮಾರುಕಟ್ಟೆಗೆ ಪೂರೈಕೆಯಾಗುವ ಪ್ರಮಾಣ ಹೆಚ್ಚಳವಾಗಿಲ್ಲ. ಪ್ರತಿಕೂಲ ಹವಾಮಾನದಿಂದ ಈ ವರ್ಷ ದೇಶೀ ಉತ್ಪಾದನೆಯೂ ಇಳಿಕೆಯಾಗಿರುವ ಸಾಧ್ಯತೆಯಿದೆ. ಅಂತರಾಷ್ಟ್ರೀಯ ವಾಗಿಯೂ ಉತ್ಪಾದನೆ ಇಳಿಕೆಯಾಗಿದ್ದು ದರವೂ ಅಧಿಕವಿದೆ. ಉತ್ಪಾದನೆ ಇಳಿಕೆಯ ಹಿನ್ನಲೆಯಲ್ಲಿ ಮುಂದೆ ದರ ಹೆಚ್ಚಳವಾಗುವ ಸಾಧ್ಯತೆಯಿದೆ.

## ಗೋಧಿ, ಜೋಳ ಜಾಗತಿಕ ದರ ಹೆಚ್ಚಳ

ಉಕ್ರೈನ್, ರಷ್ಯಾ ಸಂಘರ್ಷ ದಿಂದ ಜಾಗತಿಕ ಮಾರುಕಟ್ಟೆಗೆ ಆ ಪ್ರದೇಶದಿಂದ ಆವಕವಾಗುವ ಗೋಧಿ, ಜೋಳ ಸ್ಥಗಿತಗೊಂಡಿರುವುದರಿಂದ ಜಾಗತಿಕ ದರ ಹೆಚ್ಚಳವಾಗಿದೆ. ಬೇಡಿಕೆಗನುಗುಣವಾದ ಪೂರೈಕೆಯ ಅನುಪಾನದಿಂದ ದರಗಳು ಹೆಚ್ಚಾಗಿವೆ. ಭಾರತದಿಂದ ಹೆಚ್ಚಿನ ಪ್ರಮಾಣ ರಫ್ತು ಬೇಡಿಕೆಯಿರುವುದರಿಂದ, ಉತ್ಪಾದನೆ ಹೆಚ್ಚಳದ ಹೊರತಾಗಿಯೂ ಅವುಗಳ ದರ ಹೆಚ್ಚಳವಾಗಿದ್ದು, ಇನ್ನೂ ಹೆಚ್ಚಳವಾಗುವ ಸಾಧ್ಯತೆಯಿದೆ. ಪಶು, ಪಕ್ಷಿ ಆಹಾರ ತಯಾರಿಕೆಯಲ್ಲಿ ಜೋಳ, ಸೋಯಮೀಲ್ ಉಪಯೋಗಿಸುತ್ತಿರುವುದರಿಂದ ಪೌಲ್ಟ್ರಿ ಫೀಡ್ ದರಗಳೂ ಹೆಚ್ಚಳವಾಗಿದೆ. ಈಗ ಪರ್ಯಾಯವಾಗಿ ಗೋಧಿ ಹಾಗೂ ಕಡಿ ಅಕ್ಕಿಯ ಉಪಯೋಗವೂ ಆಗುತ್ತಿದೆ. ಗೋಧಿ, ಜೋಳ ದರ ಹೆಚ್ಚಳದೊಂದಿಗೆ ಪಶು ಆಹಾರದ ದರವೂ ಹೆಚ್ಚಳವಾಗಿದೆ.